# ಒಂದು ಪರಿಚಯ

ಒಬ್ಬನು ಒಡಂಬಡಿಕೆಗಳ ತತ್ವಗಳನ್ನು ಅರಿತುಕೊಳ್ಳದಿದ್ದರೆ ಬೈಬಲನ್ನು ಅರಿತು ಕೊಳ್ಳಲಾರನು, ಯಾಕಂದರೆ ಬೈಬಲು ಹಲವಾರು ಮಹತ್ವವುಳ್ಳ ಒಡಂಬಡಿಕೆಗಳ ಸುತ್ತ ಕಟ್ಟಲ್ಪಟ್ಟಿದೆ. ಕ್ರಿಸ್ತನಲ್ಲಿ ನಾವು ಹೊಂದಿಕೊಳ್ಳುವ ಆಶೀರ್ವಾದಗಳು ಪುರಾತನ ಕಾಲದ ಒಂದು ಒಡಂಬಡಿಕೆಯ ಮತ್ತು ಯೇಸು ನಮ್ಮೊಂದಿಗೆ ಮಾಡಿಕೊಂಡ ಕೊನೆಯ ಒಡಂಬಡಿಕೆಯ ನೆರವೇರುವಿಕೆಯಾಗಿದೆ.

ಒಡಂಬಡಿಕೆಯು ಬಂಧಿಸುವ ವಾಗ್ದಾನ ಇಲ್ಲವೇ ಒಪ್ಪಂದವಾಗಿದೆ. “ಒಡಂಬಡಿಕೆ” *(berith)* ಎಂದು ಭಾಷಾಂತರಿಸಲ್ಪಟ್ಟ ಹಿಬ್ರೂ ಪದವು *barah* ಎಂಬ ಹಿಬ್ರೂ ಪದದಿಂದ ಬರುವಂಥದ್ದು, ಅದರ ಅರ್ಥ “ಕತ್ತರಿಸುವದಕ್ಕೆ” (cut) ಇಲ್ಲವೇ “ರೊಟ್ಟಿಯನ್ನು ತಿನ್ನಲು” (to eat bread with) ಎಂದಾಗುತ್ತದೆ. ಅದು *beritu* ಎಂಬುದರೊಂದಿಗೂ ಸಂಬಂಧಿಸಿರುವುದು, “ಬೇಡಿ, ಬಂಧನ” ಎಂಬುದಕ್ಕಾಗಿ ಪದ ಮತ್ತು, *biret* ಅರ್ಥ “ಮಧ್ಯದಲ್ಲಿ” ಎಂಬುದು.

ದೇವರು ನೋಹ, ಅಬ್ರಹಾಮ, ದಾವೀದ ಮತ್ತು ಇತರ ವ್ಯಕ್ತಿಗಳೊಂದಿಗೆ, ಹಾಗೆಯೇ ಜನರೊಂದಿಗೂ ಜನಾಂಗಗಳೊಂದಿಗೂ ಒಡಂಬಡಿಕೆ ಮಾಡಿಕೊಂಡನು. ಅತ್ಯುತ್ತಮ ವಾಗಿ ತಿಳಿಯಲ್ಪಟ್ಟ ಒಡಂಬಡಿಕೆಗಳು ಇಸ್ರಾಯೇಲ್ಯರೊಂದಿಗೆ ಮಾಡಿಕೊಂಡ ಹಳೇ ಒಡಂಬಡಿಕೆ ಮತ್ತು ಕ್ರೈಸ್ತರೊಂದಿಗೆ ಆತನು ಮಾಡಿಕೊಂಡ ಹೊಸ ಒಡಂಬಡಿಕೆ. ಈ ಒಡಂಬಡಿಕೆಗಳಲ್ಲಿ ಕೆಲವು ಅವುಗಳನ್ನು ದೇವರು ಯಾರೊಂದಿಗೆ ಮಾಡಿಕೊಂಡನೋ ಅವರಿಗೆ ನೇರವಾಗಿ ಲಾಭವನ್ನುಂಟು ಮಾಡಿದವು. ಇತರವುಗಳು, ಒಡಂಬಡಿಕೆಗಳು ಅವರ ಪೂರ್ವಜರಿಗೆ ಮಾಡಲ್ಪಟ್ಟದ್ದರಿಂದ ಆಶೀರ್ವಾದಿಸಲ್ಪಡುವ ಅನೇಕ ಸಂತತಿಗಳ ನಂತರದ ಕಡೆಗೆ ನೋಡಿದವು.

ಮಾನವ ಜೀವಿಗಳೊಂದಿಗೆ ದೇವರು ಒಡಂಬಡಿಕೆಗಳನ್ನು ಮಾಡಿದ್ದಲ್ಲದೆ, ಮನುಷ್ಯರೂ ಸಹ ಒಬ್ಬರೊಂದಿಗೆ ಒಬ್ಬರು ಒಡಂಬಡಿಕೆ ಮಾಡಿಕೊಂಡರು. ಹಳೇ ಒಡಂಬಡಿಕೆಯ ಒಡಂಬಡಿಕೆಗಳು ಗುಣಲಕ್ಷಣಗಳಲ್ಲಿ ಭಿನ್ನವಾಗಿದ್ದವು, ಆದರೆ ಅವುಗಳಲ್ಲಿ ಹೆಚ್ಚಾದವುಗಳು ಎರಡು ಪಕ್ಷಗಳಲ್ಲಿ ಕಾನೂನು ಬದ್ಧವಾಗಿ ಬಂಧಿಸುವ ಜವಾಬ್ದಾರಿಕೆಗಳಾಗಿದ್ದವು.

ಕೆಲವು ಒಡಂಬಡಿಕೆಗಳ ನಿಯಮಗಳು ಒಂದು ಪಕ್ಷದಿಂದ ಇಲ್ಲವೇ ಸಮಾನ ಮಟ್ಟದ ಎರಡು ಪಕ್ಷಗಳಿಂದ ಏರ್ಪಡಿಸಲ್ಪಟ್ಟಿರುತ್ತವೆ ಮತ್ತು ಆಮೇಲೆ ಸ್ವೇಚ್ಛೆಯಿಂದ ಎರಡೂ ಪಕ್ಷಗಳಿಂದ ಒಪ್ಪಿಕೊಳ್ಳಲ್ಪಡುತ್ತವೆ. ಇನ್ನೊಂದು ತರದ ಒಡಂಬಡಿಕೆಯು, ಆ ಆಶೀರ್ವಾದಗಳನ್ನು ಸ್ವೀಕರಿಸುವವರ ಮೇಲೆ ಯಾವುದೇ ಬೇಡಿಕೆಗಳನ್ನು ಹಾಕದೇ, ದ್ವಿತೀಯ ಪಕ್ಷಕ್ಕಾಗಿ ಕೆಲವೊಂದು ಆಶೀರ್ವಾದಗಳನ್ನು ಒದಗಿಸುವ ಪ್ರಥಮ ಪಕ್ಷದಿಂದ ವಾಗ್ದಾನವನ್ನು ಒಳಗೊಂಡಿರುತ್ತದೆ.

ಪಕ್ಷಗಳು ಸಮಾನತೆಯಿಲ್ಲದವುಗಳಾಗಿರುವಾಗ, ಹೆಚ್ಚುದೊಡ್ಡ ವ್ಯಕ್ತಿಯು ಒಡಂಬಡಿಕೆಯ ನಿಯಮಗಳನ್ನು ಕಡಿಮೆ ತರಗತಿಯವನ ಮೇಲೆ ಹೊರಿಸಬಹುದು. ಅಂಥ ಒಡಂಬಡಿಕೆಗಳು ಕಡಿಮೆ ತರಗತಿಯ ಪಕ್ಷದಿಂದ ವಿಧೇಯತೆಯನ್ನು ಬೇಡು

ತ್ತವೆ. ಒಡಂಬಡಿಕೆಯನ್ನು ಕೈಕೊಳ್ಳುವಲ್ಲಿ ಆಶೀರ್ವಾದಗಳನ್ನು ಒಳಗೊಂಡಿರುತ್ತದೆ ಇಲ್ಲವೇ ಒಡಂಬಡಿಕೆಯು ಮುರಿಯಲ್ಪಟ್ಟರೆ ಕಠಿಣವಾದ ಪರಿಣಾಮಗಳನ್ನು ಒಳಗೊಂಡಿರುತ್ತದೆ.

ಒಡಂಬಡಿಕೆಯ ನಿಯಮಗಳು ಸ್ವೀಕರಿಸಲ್ಪಟ್ಟಾಗ, ಅವು ವಿವಿಧ ಮಾರ್ಗಗಳಲ್ಲಿ ಕಾನೂನು ಬದ್ಧವಾಗಿ ಬಂಧಿಸುವಂತೆ ಮಾಡಲ್ಪಡುತ್ತವೆ. ಪ್ರಮಾಣ ವಚನಗಳನ್ನು ಬದಲಾಯಿಸಿಕೊಳ್ಳುವದರಿಂದ, ಊಟದಲ್ಲಿ ಪಾಲುಗಾರರಾಗುವದರಿಂದ ಇಲ್ಲವೇ ಒಡಂಬಡಿಕೆಯ ಕೆಲವೊಂದು ಗುರುತುಗಳನ್ನು ಕೊಡುವದರಿಂದ ಒಪ್ಪಂದಕ್ಕೆ ಮುದ್ರೆ ಹಾಕಲ್ಪಡಬಹುದು. ಒಡಂಬಡಿಕೆಯಿಂದ ಬಂಧಿಸಲ್ಪಟ್ಟವನು ಕಲ್ಲುಗಳ ರಾಶಿಯನ್ನು ಕಟ್ಟಬಹುದು ಇಲ್ಲವೇ ಸಾಂಕೇತಿಕ ಕಾಣಿಕೆ ಕೊಡಬಹುದು, ಅದು ವೈಯಕ್ತಿಕ ವಸ್ತು ವಾಗಿರಬಹುದು. ಕೆಲವು ಸಂದರ್ಭದಲ್ಲಿ ಒಂದು ಒಡಂಬಡಿಕೆಯಲ್ಲಿ ಪ್ರವೇಶಿಸುವವರು ಒಂದು ಪ್ರಾಣಿಯನ್ನು ಇಲ್ಲವೇ ಪ್ರಾಣಿಗಳನ್ನು ಎರಡೆರಡು ತುಂಡುಗಳಾಗಿ ಬೇರ್ಪ ಡಿಸಲ್ಪಟ್ಟವುಗಳ ಮಧ್ಯದಲ್ಲಿ ದಾಟಿಹೋಗುವ ಆಚರಣೆಯಲ್ಲಿ ಭಾಗವಹಿಸಬಹುದು.

ಒಡಂಬಡಿಕೆಗಳನ್ನು ಬಂಧಿಸುವಂತೆ ಮಾಡಲು ಉಪಯೋಗಿಸುವ ಕಾರ್ಯ ಗಳು ಸಾಂಕೇತಿಕ ಅರ್ಥಗಳಿಂದ ಸಂಬಂಧಿಸಲ್ಪಟ್ಟಿದ್ದವು. ಉದಾಹರಣೆಯಾಗಿ ಉಪ್ಪು ಒಡಂಬಡಿಕೆಯ ನಿರಂತರ ಸ್ವರೂಪದ ಸಂಕೇತದಂತೆ ಉಪಯೋಗಿಸಲ್ಪಟ್ಟಿತು. ಇಬ್ಭಾಗವಾಗಿ ಮಾಡಲ್ಪಟ್ಟ ಪ್ರಾಣಿಯ ಭಾಗಗಳ ಮಧ್ಯದಲ್ಲಿ ದಾಟಿಹೋಗುವುದು ಒಡಂಬಡಿಕೆಯನ್ನು ಮೀರಿ ಹೋಗುವವನು ಭಾಗಭಾಗವಾಗಿ ಕಡಿಯಲ್ಪಡುವನು ಎಂಬುದನ್ನು ಅನ್ವಯಿಸಿತು. ಊಟ ಮಾಡುವಂಥದ್ದು ಒಡಂಬಡಿಕೆಯನ್ನು ಬಂಧಿಸುವಂತೆ ಮಾಡುವ ಸಹೋದರತ್ವದ ನಂಬಿಕೆಯನ್ನು ಪ್ರತಿನಿಧೀಕರಿಸಿತು, ಒಡಂಬಡಿಕೆಗೆ ಪ್ರಮಾಣ ವಚನದಂತೆ ಕೊಡುವ ಒಂದು ಕಾಣಿಕೆ ಇಲ್ಲವೇ ಕಲ್ಲು ಗಳನ್ನು ರಾಶಿಹಾಕಿದ್ದು ಒಡಂಬಡಿಕೆಯನ್ನು ಜ್ಞಾಪಿಸುವಂತೆ ಇರುತ್ತವೆ. ರಕ್ತವನ್ನು ಸುರಿಸುವುದು ಒಡಂಬಡಿಕೆಯ ಅತೀಯಾದ ಮಹತ್ವವನ್ನು ಸೂಚಿಸಿತು, ಯಾಕಂದರೆ ಒಡಂಬಡಿಕೆಯನ್ನು ಬಂಧಿಸುವಂತೆ ಮಾಡುವಲ್ಲಿ ಕೊಟ್ಟ ಕ್ರಯವು ರಕ್ತವಾಗಿತ್ತು.

ನಾವು ಬೈಬಲನ್ನು ಅಧ್ಯಯನ ಮಾಡುವಂತೆ, ಒಬ್ಬ ವ್ಯಕ್ತಿಯ ಮತ್ತು ಒಂದು ಗುಂಪಿನ ಇಲ್ಲವೇ ಒಂದು ಜನಾಂಗದ ಮಧ್ಯದಲ್ಲಿ ಮತ್ತು ಎರಡು ಗುಂಪುಗಳ ಮಧ್ಯದಲ್ಲಿ, ಸಮಾನ ವ್ಯಕ್ತಿಗಳ ಮಧ್ಯದಲ್ಲಿ ಮಾಡಲ್ಪಟ್ಟ ಒಡಂಬಡಿಕೆಗಳನ್ನು ಎದುರಿಸುತ್ತೇವೆ, ಜನರ ಸ್ವಂತ ಹೃದಯಗಳೊಳಗೆ ಮಾಡಿಕೊಂಡ ಒಡಂಬಡಿಕೆಗಳನ್ನು ಮತ್ತು ದೇವರೊಂದಿಗೆ ಮಾಡಿಕೊಂಡ ಒಡಂಬಡಿಕೆಗಳನ್ನು ನಾವು ನೋಡುತ್ತೇವೆ. ಹಾಗಿದ್ದರೂ ಬೈಬಲಿನ ಮುಖ್ಯಭಾಗವು ದೇವರು ಜನರೊಂದಿಗೆ ಮಾಡಿಕೊಂಡ ಒಡಂಬಡಿಕೆಗಳನ್ನು ಒಳಗೊಂಡಿರುತ್ತದೆ. ವ್ಯಕ್ತಿಗಳೊಂದಿಗೆ, ಆಯ್ದುಕೊಂಡ ಜನಾಂಗದೊಂದಿಗೆ, ಮತ್ತು ಅಂತಿಮವಾಗಿ ಎಲ್ಲಾ ಜನರೊಂದಿಗೆ ದೇವರು ಮಾಡಿದ ವಿಶೇಷವಾದ ಒಡಂಬಡಿಕೆಗಳ ಅಧ್ಯಯನದಲ್ಲಿ ತೊಡಗೋಣ.

© 2009 Truth for Today